## 'ಹೂವು ಹಣ್ಣು'



ಅಂದು ಭಾನುವಾರ, ಪತಿ ಕೆಲಸದ ಮೇಲೆ ಹೊರಗೆ ಹೋದವರು ಸಂಜೆಯೇ ಬರುವವರಿದ್ದರು. ಹಾಸ್ಟೆಲ್‌ನಲ್ಲಿದ್ದ ಗೆಳತಿಗೆ ಬೆಳಿಗ್ಗೆಯೇ ಬರಲು ಹೇಳಿದೆ. ಅವಳು ಹಾಜರಾದಳು. ಇಬ್ಬರೂ ತಿಂಡಿ ತಿಂದು, ಮಾತನಾಡುತ್ತ ಅಡುಗೆ, ಮಧ್ಯಾಹ್ನದ ಊಟ ಮುಗಿಸಿದೆವು. ಸಂಜೆ ಕಾಫಿ ನಂತರ ಅವಳು ಹೊರಡಲು ಅನುವಾದಳು. ಹೊರಡುವಾಗ, 'ಅಯ್ಯೋ ನಿಂಗೆ ಅಂತ ಹೂವು ಹಣ್ಣು ತಂದಿದ್ದೆ ಕಣೆ, ಕೊಡೋದನ್ನೇ ಮರೆತೆ ನೋಡು' ಎಂದಳು. ನಾನು, 'ಇಷ್ಟು ಹೊತ್ತಿಗೆ ಹೂವೆಲ್ಲಾ ಬಾಡಿರುತ್ತೆ ಬಿಡು' ಎಂದೆ. ಅವಳು ತನ್ನ ಬ್ಯಾಗಿಗೆ ಕೈ ಹಾಕುತ್ತ, 'ಇದು ಬಾಡದ ಹೂವು, ತಗೊಳ್ಳೆ' ಅಂತ ತ್ರಿವೇಣಿ ಅವರ 'ಹೂವು ಹಣ್ಣು' ಕಾದಂಬರಿಯನ್ನು ನನ್ನ ಕೈಗೆ ಕೊಟ್ಟಳು.

**ಸು. ವಿಜಯಲಕ್ಷ್ಮಿ**



## ಗಂಡು ತತ್ತಿಗಳು

ನಾನು ಸ್ತ್ರೀರೋಗ ತಜ್ಞೆ. ಅದೊಂದಿನ ಗರ್ಭಿಣಿಯನ್ನು ಪರೀಕ್ಷಿಸುತ್ತಿದ್ದೆ. ಅವಳಿಗೆ ತನ್ನ ಆರೋಗ್ಯಕ್ಕಿಂತ ಹುಟ್ಟಲಿರುವ ಮಗು ಹೆಣ್ಣೊ, ಗಂಡೊ ಎನ್ನುವುದನ್ನು ತಿಳಿದುಕೊಳ್ಳುವುದೇ ಮುಖ್ಯವಾಗಿತ್ತು. ನಾನು ಅವಳಿಗೆ ಎದುರಿಗಿದ್ದ ಚಿತ್ರವನ್ನು ತೋರಿಸಿ, 'ನೋಡು, ಆ ಪಕ್ಷಿ ಎಲ್ಲಾ ತತ್ತಿಗಳಿಗೆ ಸಮನಾಗಿ ಕಾವು ಕೊಡುತ್ತೆ. ಹೆಣ್ಣೊ–ಗಂಡೊ ಎಂದು ನೋಡುವುದಿಲ್ಲ' ಎಂದೆ. ಅದಕ್ಕೆ ಅವಳು, '10–8 ತತ್ತಿಗಳಲ್ಲಿ 4–3 ಆದ್ರೂ ಗಂಡು ತತ್ತಿಗಳು ಇರ್ತಾವೆ ಅಂತ ಅದಕ್ಕೂ ಗೊತ್ತಿರುತ್ತೆ ಬಿಡಿ' ಎನ್ನಬೇಕೆ!

**ಡಾ. ಅನ್ನಪೂರ್ಣ ಗೌರಾ**